ಕನ್ನಡಪ್ರಭ

## ಅಣ್ಣಾ: ದಾರಿ ಯಾವುದಯ್ಯಾ ನಮ್ಮ ಗುರಿ ಸಾಧನೆಗೆ?

**ದೇ**ಶದ ವಿಖ್ಯಾತ ನಿರಶನ ಸತ್ಯಾಗ್ರಹಿ, ಸದ್ಯದಲ್ಲಿ ಭ್ರಷ್ಟಾಚಾರದ ವಿರುದ್ಧದ ರಾಷ್ಟ್ರೀಯ ಸಮರದ ಸೇನಾನಿ, ಅಣ್ಣಾ ಹಜಾರೆ ತಮ್ಮ ಗುರಿಯ ಸಾಧನೆಗೆ ಉಪವಾಸ ವ್ರತದ ಮಾರ್ಗ ಬಿಟ್ಟು ಪರ್ಯಾಯ ಮಾರ್ಗ ಹುಡುಕಲು ಮುಂದಾಗಿರುವುದು ಈಗಿನ ಶಕ್ತಿ ರಾಜಕಾರಣದ ಪರಿಸ್ಥಿತಿಯ ವಾಸ್ತವದ ದರ್ಶನ.

ವರ್ಷದ ಹಿಂದೆ ಅಣ್ಣಾ ತಂಡ ದೆಹಲಿಯ ಜಂತರ – ಮಂತರದಲ್ಲಿ ಆರಂಭಿಸಿದ ಗಾಂಧಿ ಮಾರ್ಗದ ಹೋರಾಟದ ಪರಿಣಾಮವಾಗಿ ಒಂದು ಲೋಕಪಾಲ ವಿಧೇಯಕ ಸಂಸತ್ತಿನ ಮುಂದೆ ಬಂದಿದ್ದು ನಿಜ.

ಆ ವಿಧೇಯಕವನ್ನು ಸಿದ್ಧಪಡಿಸುವ ಮುನ್ನ ಸರ್ಕಾರದ ಅತಿರಥ – ಮಹಾರಥರ ತಂಡ ಅಣ್ಣಾ ತಂಡದ ಪ್ರತಿನಿಧಿಗಳ ಜತೆ ಕೂತು ಸುದೀರ್ಘವಾದ ಚರ್ಚೆ – ವಿಚಾರ ವಿನಿಮಯ ನಡೆಸಿತ್ತು. ಒಂದು ರೀತಿಯಲ್ಲಿ ಅದೇ ಒಂದು ದೊಡ್ಡ ಸಾಧನೆ.



ಸರ್ಕಾರ ರೂಪಿಸಿದ್ದ ಲೋಕಪಾಲ ವಿಧೇಯಕ ಹಲವು ಬದಲಾವಣೆಗಳನ್ನು ಧರಿಸಿ ಲೋಕಸಭೆಯ ಒಪ್ಪಿಗೆಯನ್ನು ಪಡೆದರೂ, ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್‌ನ ಕಟ್ಟಕಡೆಯ ನಿಮಿಷದ ವಿರೋಧದಿಂದಾಗಿ ಸಮಿತಿಯೊಂದರ ಪರಿಶೀಲನೆಗೆ ಹೋಗಿತ್ತು. ಈಗಲೂ ಕಾಯಿದೆಯ ರಚನೆಯ ಪ್ರಕ್ರಿಯೆ ಅಲ್ಲಿಗೇ ನಿಂತಿದೆ. ಈಗಾಗಲೇ ಈ ವಿಧೇಯಕದ ಪರಿಶೀಲನಾ ಹಂತ ಮುಗಿದು ವಾರಗಳೇ ಕಳೆದಿವೆ. ಇನ್ನು ಉಳಿದಿರುವುದು ಮತದಾನದ ಪ್ರಕ್ರಿಯೆ ಮಾತ್ರ. ಈ ಹಂತದಲ್ಲೂ ತಾನು ಹೇಳಿದ ರೀತಿಯಲ್ಲೇ ಆ ವಿಧೇಯಕ ಇರಬೇಕೆಂದು ಅಣ್ಣಾ ತಂಡ ಹಿಡಿದ ಹಟವನ್ನು ಒಪ್ಪಿದ ಪ್ರಮುಖರ ಸಂಖ್ಯೆಗಿಂತ ಒಪ್ಪದೇ ಇದ್ದವರ ಸಂಖ್ಯೆ ಹೆಚ್ಚಿತ್ತು.

ಈ ವಿವಾದದ ಜತೆಯಲ್ಲೇ ಅಣ್ಣಾ ತಂಡ ಕೇಂದ್ರದ ಹದಿನಾಲ್ಕು ಸಚಿವರ ವಿರುದ್ಧ (ಅದರಲ್ಲಿ ಆಗ ಮಂತ್ರಿಯಾಗಿದ್ದ ಪ್ರಣಬ್ ಮುಖರ್ಜಿ ಅವರೂ ಒಬ್ಬರು) ಹಲವಾರು ಆರೋಪಗಳ ಪಟ್ಟಿ ಸಲ್ಲಿಸಿ ಅದರ ತನಿಖೆಗೆ ವಿಶೇಷ ತನಿಖಾ ದಳದ ರಚನೆಗೆ ಒತ್ತಾಯ ಪಡಿಸಿದಾಗ, ಈ ಸಮಸ್ಯೆಯ ಇತ್ಯರ್ಥ ಅಸಾಧ್ಯವೆನಿಸಿತ್ತು. ಜಗ್ಗಾಟದಲ್ಲಿ ಹಗ್ಗವೇ ಕಿತ್ತು ಬಂದಿತ್ತು. ಕೇಂದ್ರ ಸರ್ಕಾರಕ್ಕೆ ಕಾಯಿದೆ ರಚನೆಯ ಅಧಿಕಾರವನ್ನು ಸಂಸತ್ತಿನಿಂದ ಕಿತ್ತುಕೊಳ್ಳುವ ಅಧಿಕಾರವಿಲ್ಲ. ಮಂತ್ರಿಗಳ ಮೇಲಿನ ಆರೋಪ ತನಿಖೆಗೆ ವಿಶೇಷ ದಳವನ್ನು ರಚಿಸಿದರೆ ಮಂತ್ರಿಮಂಡಲದ ಅಸ್ತಿತ್ವವನ್ನೇ ಅಲ್ಲಗಳೆದಂತೆ ಆಗುತ್ತಿತ್ತು.

ಈ ಬೇಡಿಕೆಗಳನ್ನು ಬೆಂಬಲಿಸಲು ಅಣ್ಣಾ ತಂಡ ಮತ್ತೆ ನಿರಶನ ಸತ್ಯಾಗ್ರಹದ ತಂತ್ರವನ್ನೇ ಹಿಡಿದಾಗ, ಅದನ್ನು ಸರ್ಕಾರವೂ ಅಲಕ್ಷ್ಯ ಮಾಡಿತ್ತು, ಹಿಂದಿನ ವರ್ಷದ ಸತ್ಯಾಗ್ರಹದ ಕಾಲದಲ್ಲಿ ಶಿಬಿರಕ್ಕೆ ಬರುತ್ತಿದ್ದ ಜನ ಸಮುದಾಯಗಳ ಉತ್ಸಾಹವೂ ತಣ್ಣಗಾಗಿತ್ತು. ಆ ವೇಳೆಗಾಗಲೇ ರಾಜಕೀಯ ಉದ್ದೇಶದ ಈಡೇರಿಕೆಗೆ ರಾಜಕೀಯದಿಂದ ದೂರವಿರುವ ಪರ್ಯಾಯ ಮಾರ್ಗದಲ್ಲಿ ಸಾಗಲು ಅಣ್ಣಾ ತಂಡ ಮುಂದಾಗಿರುವ ಅನುಮಾನ ಜನರಲ್ಲಿ ಮೂಡಿತ್ತು. ನಿಜ. ಇದೇನೂ ಹೊಸ ವಿಚಾರವಲ್ಲ. ಒಂದು ರೀತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಮಹಾತ್ಮಾ ಗಾಂಧೀಜಿ ಬಳಸಿದ್ದೂ ಅದೇ ಮಾರ್ಗ. ಆದರೆ ಈಗ ಈ ವಿಚಾರದಲ್ಲಿ ವೈಯಕ್ತಿಕವಾಗಿ ಅಣ್ಣಾ ಹಜಾರೆಗೂ ಸ್ಪಷ್ಟವಾಗಿ, ನಿಖರವಾಗಿ ಚಿಂತಿಸುವುದು ಸಾಧ್ಯವಾಗಿಲ್ಲ. ಅಣ್ಣಾ ತಂಡದ ಇತರರಲ್ಲಿ ಒಡಕು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಮುಖರ ಮನವಿಗೆ ಸ್ಪಂದಿಸಿ ಅಣ್ಣಾ ಹಜಾರೆ ತಂಡ ತನ್ನ ಹೋರಾಟದ ಮಾರ್ಗವನ್ನು ಬದಲಾಯಿಸಲು ಅನಿವಾರ್ಯವಾಗಿ ತೀರ್ಮಾನಿಸಿದೆ. ಅಲ್ಲೂ ಸ್ಪಷ್ಟ, ಖಚಿತ ಚಿಂತನೆ ಕಂಡು ಬಂದಿಲ್ಲ.

ಬುದ್ಧಿವಂತಿಕೆಯಿಂದ ಅಣ್ಣಾ ಹಜಾರೆ ಬೇರೆ ಬೇರೆ ಪದಗಳನ್ನು ಬಳಸಿ ನಿರಶನ ಸತ್ಯಾಗ್ರಹದ ಅಸ್ತ್ರ ತನ್ನ ಉಪಯುಕ್ತತೆಯನ್ನು ಮುಗಿಸಿಕೊಂಡಿರುವುದನ್ನು ಒಪ್ಪಿ ಜನತೆಗೆ ತಮ್ಮ ತಂಡ ಒಂದು ರಾಜಕೀಯ ಪರ್ಯಾಯ ವ್ಯವಸ್ಥೆಯನ್ನು ನೀಡಲಿದೆ ಎನ್ನುವ ಭರವಸೆ ನೀಡಿದ್ದಾರೆ. ಯಾವ ದೃಷ್ಟಿಯಿಂದ ನೋಡಿದರೂ ಅನುಭವದ ಗಣಿಯನ್ನು ಅಗೆದು – ಬಗೆದರೂ ಯಾವ ಸೂತ್ರವೂ ಗೋಚರಿಸುತ್ತಿಲ್ಲ. ಕಳೆದ ವರ್ಷ ಅಣ್ಣಾ ಜತೆಗಿದ್ದ ಸಂಘ ಪರಿವಾರವೂ ಈಗ ತಟಸ್ಥವಾಗಿದೆ.

ಹಿಂದೆ, 1970 ರ ದಶಕದಲ್ಲಿ ಭ್ರಷ್ಟಾಚಾರದ ವಿರುದ್ಧ ಲೋಕನಾಯಕ ಜಯಪ್ರಕಾಶ ನಾರಾಯಣ್ ಸೆಡ್ಡು ಹೊಡೆದ ಸನ್ನಿವೇಶದಲ್ಲಿ, ಅವರ ಹಿಂದಿನ ಸಮಾಜವಾದಿ ಚಟುವಟಿಕೆಯ ಫಲವಾಗಿ ಅವರಿಗೆ ದೊಡ್ಡ ರೀತಿಯಲ್ಲಿ ರಾಜಕೀಯ ಬೆಂಬಲ ಸಿಕ್ಕಿತ್ತು. ವೈಯಕ್ತಿಕವಾಗಿ ಜೆಪಿ ನಿಜ ರಾಜಕೀಯದಿಂದ ಹೊರಗೇ ಇದ್ದರೂ ಅವರ ರಾಜಕೀಯ ಸಂಪರ್ಕಗಳು ಗಟ್ಟಿಯಾಗಿದ್ದವು. ಆ ಸಮಯದಲ್ಲಿ ರಾಜಕೀಯ ಪಕ್ಷಗಳು ಬದಲಾದರೂ ರಾಜಕೀಯ ಬದಲಾಗಲಿಲ್ಲ. ಜೆಪಿ ಪ್ರಯೋಗ ಸೋತಿತ್ತು.

1980 ರ ದಶಕದಲ್ಲಿ ವಿಶ್ವನಾಥ ಪ್ರತಾಪಸಿಂಗ್ ಕೇಂದ್ರ ಮಂತ್ರಿ ಸ್ಥಾನದಿಂದ ಹೊರಬಿದ್ದು ಭ್ರಷ್ಟಾಚಾರದ ವಿರುದ್ಧ ತಮ್ಮ ಜನಮೋರ್ಚಾ ಹೋರಾಟ ನಡೆಸಿದಾಗ ಅವರಿಗೆ ಮುಂದೆ ಅದು ರಾಜಕೀಯ (ಚುನಾವಣೆ?) ಹೋರಾಟವಾಗಿ ಪರಿವರ್ತನೆಯಾಗಲೇಬೇಕೆನ್ನುವ ಅರಿವಿತ್ತು. ಹಾಗೇ ಆಯಿತು. ಆದರೆ ರಾಜಕೀಯ ಮೊದಲಿನಂತೆಯೇ ಉಳಿದು ಬಿಟ್ಟಿತ್ತು. ಈಗ ಅಣ್ಣಾ ಹಜಾರೆ, ಇತರ ಅನೇಕ ಶಕ್ತಿಗಳಂತೆ ಕಾಂಗ್ರೆಸ್ – ಬಿಜೆಪಿಗಳನ್ನು ಸಮಾನವಾಗಿ ವಿರೋಧಿಸುವ ನೀತಿಯನ್ನು ರಾಜಕೀಯವಾಗಿ ಒಪ್ಪುವುದಾದರೆ, ಅದಕ್ಕೆ ಇನ್ನೆರಡು ವರ್ಷಗಳಲ್ಲಿ ದೇಶದ ಎಲ್ಲ ಕಡೆ ಜನ ಬೆಂಬಲವನ್ನು ರೂಪಿಸುವುದು ಕಡುಕಷ್ಟದ ಮಾತೇ. ಇಷ್ಟಕ್ಕೂ ಅಣ್ಣಾ ಹಜಾರೆ ಅವರಿಗೆ ರಾಜಕೀಯ ಪಕ್ಷವನ್ನು ಕಟ್ಟುವುದರಲ್ಲಿ ಅಥವಾ ಈಗಿನ ಯಾವುದಾದರೂ ಪಕ್ಷವನ್ನು ಸೇರುವುದರಲ್ಲಿ ಆಸಕ್ತಿ ಇಲ್ಲವಂತೆ.

ಆದರೂ ಅವರು ಹೊಸ ರಾಜಕೀಯ ಪಕ್ಷದ ರಚನೆಗೆ ವಿರೋಧವಾಗಿಲ್ಲವಂತೆ. ಹಾಗಿದ್ದರೆ ಭ್ರಷ್ಟಾಚಾರದ ವಿರುದ್ಧದ ಹೋರಾಟದ ನಾಯಕತ್ವ ಎಲ್ಲಿಂದ ಬರಬೇಕು? ಪರ್ಯಾಯ ವ್ಯವಸ್ಥೆಯನ್ನು ರೂಪಿಸುವ ಮಾರ್ಗ ಯಾವುದು? ಇಂತಹ ಪ್ರಶ್ನೆಗಳಿಗೆಲ್ಲ ಸಿದ್ಧಪಡಿಸಿದ ಉತ್ತರಗಳಿಲ್ಲ. ಅಣ್ಣಾ ಹಜಾರೆ ತಮ್ಮ ಹೋರಾಟವನ್ನು ಬಲಿಷ್ಠ ಲೋಕಪಾಲ ವ್ಯವಸ್ಥೆಯ ಆಧಾರದ ಮೇಲೇ ರೂಪಿಸಿದ್ದರು. ಈಗ ಅವರ ತಂಡದ ಅಸ್ತಿತ್ವ ಹಾಗೂ ಏಕತೆಯೇ ಅಪಾಯದ ಅಂಚನ್ನು ತಲುಪಿರುವ ಹಿನ್ನೆಲೆಯಲ್ಲಿ ಸ್ಪಷ್ಟವಾದ ಚಿಂತನೆ ಅಗತ್ಯ. ಪರ್ಯಾಯ ವ್ಯವಸ್ಥೆ ತಾನೇ ತಾನಾಗಿ ಮೂಡುವುದಿಲ್ಲ.

## ಪತ್ರಪ್ರಭ

ಕನ್ನಡಪ್ರಭ, ನಂ.1 ಕ್ವೀನ್ಸ್ ರಸ್ತೆ,
ಬೆಂಗಳೂರು–560001.
email: anisikeprabha@gmail.com

### ಪರೀಕ್ಷಾ ಮೇಲ್ವಿಚಾರಕರಿಂದ ತಾರತಮ್ಯ

**ದಿ**ನಾಂಕ 28.07.2012 ಶನಿವಾರದಂದು ಕರ್ನಾಟಕ ಪರೀಕ್ಷಾ ಮಂಡಳಿ ನಡೆಸಿದ ಸ್ನಾತಕೋತ್ತಕ ಸಾಮಾನ್ಯ ಪ್ರವೇಶ ಪರೀಕ್ಷೆ (ಎಂ.ಟೆಕ್)2012ರಲ್ಲಿ ತುಮಕೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನ 10ಬಿ ಕೊಠಡಿಯಲ್ಲಿ ಪರೀಕ್ಷೆ ಬರೆದ ನಾವುಗಳು ಪ್ರಶ್ನೆ ಪತ್ರಿಕೆಯಲ್ಲಿ ನಮೂದಿಸಿರುವ ಸೂಚನೆಯಂತೆ ನಾನ್ ಪ್ರೋಗ್ರಾಮಬಲ್ ಕ್ಯಾಲ್ಕ್ಯುಲೇಟರ್‌ಗಳ ಬಳಕೆಗೆ ಅವಕಾಶವಿದ್ದರೂ ಕೊಠಡಿ ಮೇಲ್ವಿಚಾರಕರು ಹಾಗೂ ಪರೀಕ್ಷಾ ಮೇಲ್ವಿಚಾರಕರು ಅವಿದ್ಯಾವಂತರಂತೆ ವರ್ತಿಸಿ ಪ್ರಶ್ನೆ ಪತ್ರಿಕೆಯಲ್ಲಿ ನಮೂದಿಸಿರುವ ಸೂಚನೆಯನ್ನು ಇದು ಹಳೆಯ ಸೂಚನೆ ಪ್ರತಿವರ್ಷವೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಅದೇ ಸೂಚನೆಗಳನ್ನು ನಮೂದಿಸಿದ್ದಾರೆಂದು ನಮ್ಮ ಕೋರಿಕೆಯನ್ನು ತಿರಸ್ಕರಿಸಿದರು. ಇದನ್ನು ಪ್ರಶ್ನಿಸಿ ಕೊಠಡಿಯಲ್ಲಿ ಪರೀಕ್ಷೆ ಬರೆಯುತ್ತಿದ್ದ ನಾವೆಲ್ಲರೂ ಕೊಠಡಿ ಮೇಲ್ವಿಚಾರಕರ ಮುಖಾಂತರ ಮುಖ್ಯ ಪರೀಕ್ಷಾ ಮೇಲ್ವಿಚಾರಕರನ್ನು ಕೊಠಡಿಗೆ ಕರೆಯಿಸಿ ಪರೀಕ್ಷೆಯಲ್ಲಿ ನಾನ್ ಪ್ರೋಗ್ರಾಮಬಲ್ ಕ್ಯಾಲ್ಕ್ಯುಲೇಟರ್‌ಗಳ ಬಳಕೆಗೆ ಅವಕಾಶ ನೀಡುವಂತೆ ಸೂಚನೆಯಲ್ಲಿ ಸ್ಪಷ್ಟವಾಗಿ ನಮೂದಿಸಿರುವುದನ್ನು ತೋರಿಸಿ ಅವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರೂ, ನಮಗೆ ಕ್ಯಾಲ್ಕ್ಯುಲೇಟರ್‌ಗಳನ್ನು ಬಳಸಲು ಅವಕಾಶ ನೀಡಲಿಲ್ಲ. ಆದರೆ ಪರೀಕ್ಷೆ ಮುಗಿಸಿ ಹೊರಬಂದಂತಹ ನಾವು ನಮ್ಮ ಅಕ್ಕ–ಪಕ್ಕದ ಕೊಠಡಿಗಳಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳನ್ನು ವಿಚಾರಿಸಿದಾಗ ಹಲವು ಕೊಠಡಿಗಳಲ್ಲಿ ಕ್ಯಾಲ್ಕ್ಯುಲೇಟರ್‌ಗಳನ್ನು ಬಳಸಲು ಅವಕಾಶ ನೀಡಿರುವುದು ಬೆಳಕಿಗೆ ಬಂತು. ಇದರಿಂದ ನಮ್ಮಂತಹ ನೂರಾರು ವಿದ್ಯಾರ್ಥಿಗಳು ಬಹುತೇಕ ಪ್ರಶ್ನೆಗಳಿಗೆ ಉತ್ತರಿಸುವ ವಿಧಾನಗೊತ್ತಿದ್ದರೂ ನಿಖರವಾದ ಉತ್ತರಗಳನ್ನು ಗುರುತಿಸುವಲ್ಲಿ ವಿಫಲರಾದೆವು.

ಇಷ್ಟೆಲ್ಲಾ ಅವಾಂತರಕ್ಕೆ ಮೂಲ ಕಾರಣ ಕೊಠಡಿ ಮೇಲ್ವಿಚಾರಕರು ಹಾಗೂ ಮುಖ್ಯ ಪರೀಕ್ಷಾ ಮೇಲ್ವಿಚಾರಕರಿಗೆ ಪರೀಕ್ಷೆಯ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿದ್ದುದು. ಇದರಿಂದ ಬಹುತೇಕ ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯಕ್ಕೆ ತೊಂದರೆ ಉಂಟು ಮಾಡಿದವರ ವಿರುದ್ಧ ಸೂಕ್ತ ಕ್ರಮಕ್ಕಾಗಿ ಮತ್ತು ಮುಂದಿನ ವರ್ಷದ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ 2013ಗೆ ಪರೀಕ್ಷಾ ಮೇಲ್ವಿಚಾರಕರಿಗೆ ಪರೀಕ್ಷೆಯ ನಿಯಮಾವಳಿಗಳ ಬಗ್ಗೆ ಸಂಪೂರ್ಣವಾಗಿ ತಿಳುವಳಿಕೆ ನೀಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಪ್ರವೇಶ ಪರೀಕ್ಷೆ ನಡೆಸಬೇಕೆಂದು ಮಾನ್ಯ ಆಯುಕ್ತರು, ಕೆ.ಇ.ಎ ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಅಸಮರ್ಪಕ ಪರೀಕ್ಷಾ ವ್ಯವಸ್ಥೆಯಿಂದ ತೊಂದರೆ ಅನುಭವಿಸಿದ ನಮ್ಮೆಲ್ಲರ ಮನವಿ.

–ನೊಂದ ವಿದ್ಯಾರ್ಥಿಗಳು

# ಭಾರತಮಾತೆಯನ್ನೇ ಬದಿಗೆಸೆದವರು ಭಾರತವನ್ನು ಬದಲಿಸಿಯಾರೆ?

### ಹೊಸ ಪಕ್ಷ ಕಟ್ಟಲು ಅಣಿಯಾಗಿರುವ ಅಣ್ಣಾ ಯಾರ ವೋಟಿಗೆ ಕತ್ತರಿ ಹಾಕಲು ಹೊರಟಿದ್ದಾರೆ? ಕಾಂಗ್ರೆಸ್ಸೇತರ ಮತಗಳಿಗೇ ಅಲ್ಲವೆ? ಕಾಂಗ್ರೆಸ್ ವಿರೋಧಿ ಮತಗಳು ಒಡೆಯುವುದರಿಂದ ಯಾರಿಗೆ ಲಾಭ? ಸೋನಿಯಾ ಗಾಂಧಿಯವರಿಗೇ ಅಲ್ಲವೆ?

**ಬೆತ್ತಲೆ ಪ್ರಪಂಚ**



■ ಪ್ರತಾಪ್ ಸಿಂಹ
mepratap@gmail.com

**ಇಂ**ಥದ್ದೊಂದು ಸಾಧ್ಯತೆಯ ಸೂಚನೆ ಗುರುವಾರವೇ ಹೊರಬಿದ್ದಿತ್ತು. ವಿವಿಧ ಟಿವಿ ಚಾನೆಲ್‌ಗಳಲ್ಲಿ ಕಾಣಿಸಿಕೊಡ ಅಣ್ಣಾ ತಂಡದ ಸದಸ್ಯರಾದ ಪ್ರಶಾಂತ್ ಭೂಷಣ್, ಅಣ್ಣಾ ಅವರ ಕಟ್ಟಾ ಬೆಂಬಲಿಗರಾಗಿ ಹೊರಹೊಮ್ಮಿರುವ ನಟ ಅನುಪಮ್ ಖೇರ್ ಅದೇ ಸಂಕೇತಗಳನ್ನು ನೀಡಿದರು. ಒತ್ತಡ ತಂತ್ರದಿಂದ ಸಾಧ್ಯವಾಗಲಿಲ್ಲ ಎಂದ ಮೇಲೆ ನೇರವಾಗಿ ರಾಜಕೀಯ ಪ್ರವೇಶ ಮಾಡುವುದನ್ನು ಬಿಟ್ಟರೆ ಬೇರಾವ ಮಾರ್ಗಗಳಿವೆ ಎಂದು ಪ್ರಶಾಂತ್ ಭೂಷಣ್ ಕೇಳಿದರೆ, ಜವಾಹರಲಾಲ್ ನೆಹರು, ಮೌಲಾನಾ ಅಝಾದ್, ಸರ್ದಾರ್ ಪಟೇಲ್ ಕೂಡ ರಾಜಕಾರಣಿಗಳಾಗುವ ಮೊದಲು ನಮ್ಮಂತೆಯೇ ಚಳವಳಿಕಾರರಾಗಿದ್ದರು ಎಂದು ಅಣ್ಣಾ ತಂಡದ ರಾಜಕೀಯ ಮಹತ್ವಾಕಾಂಕ್ಷೆಯನ್ನು ಸಮರ್ಥಿಸಿಕೊಂಡರು ಖೇರ್. ಚಾನೆಲ್‌ಗಳಂತೂ 'ನಾಲ್ಕನೇ ರಂಗ' ತಲೆಯೆತ್ತೀತೆ ಎಂಬ ಪ್ರಶ್ನೆಯಿಟ್ಟುಕೊಂಡು ಚರ್ಚೆ ನಡೆಸಲಾರಂಭಿಸಿದವು.

ಅದರ ಬೆನ್ನಲ್ಲೇ 'ಪಕ್ಷ' ಸ್ಥಾಪನೆಯ ಘೋಷಣೆ ಅಧಿಕೃತವಾಗಿ ಹೊರಬಿದ್ದಿದೆ.

ಅಂಥದ್ದೊಂದು ಘೋಷಣೆ ಮಾಡುವ ಮೂಲಕ ಯಾವ ಉದ್ದೇಶ ಸಾಧನೆಗಾಗಿ ಹೊರಟಿದ್ದಾರೆ ಈ ಅರವಿಂದ ಕೇಜ್ರೀವಾಲ್? ಖಂಡಿತ ಅಣ್ಣಾ ಹಜಾರೆಯವರು ಮುಗ್ಧ ಮನುಷ್ಯ, ಈ ದೇಶದ ಒಳಿತಿನ ಬಗ್ಗೆ ಪ್ರಾಮಾಣಿಕ ಕಾಳಜಿಯೂ ಅವರಲ್ಲಿದೆ. ಆದರೆ ಅವರ ತಂಡದ ಸದಸ್ಯರ (ನ್ಯಾ.ಸಂತೋಷ್ ಹೆಗ್ಡೆ ಹೊರತುಪಡಿಸಿ) ಉದ್ದೇಶದಲ್ಲಿ ಸಾಚಾತನವಿದೆಯೇ? ಭ್ರಷ್ಟಾಚಾರ ವಿರೋಧಿ ಆಂದೋಲನ ಮಾಡಲು, ಸಾಮಾಜಿಕ ಚಳವಳಿ ನಡೆಸಲು, ಒತ್ತಡ ತಂತ್ರದ ಮೂಲಕ ಜನಲೋಕಪಾಲ್ ಕಾಯಿದೆಯನ್ನು ಜಾರಿಗೆ ತರಲು ಹೊರಟವರು ಅದನ್ನು ನಡುನೀರಿನಲ್ಲಿ ಬಿಟ್ಟು ಖಾದಿ ತೊಟ್ಟು ರಾಜಕೀಯ ಮಾಡಲು ಮುಂದಾಗಿದ್ದೇಕೆ? ಆ ರೀತಿಯ ಉಮೇದು ಬರಲು ಕಾರಣವಾದರೂ ಏನು? ಅಣ್ಣಾ ಅವರನ್ನು ಅಣ್ಣಾ ತಂಡದವರೇ ಮೂರ್ಖರನ್ನಾಗಿಸುತ್ತಿದ್ದಾರೆ ಎಂದು ಸುಬ್ರಹ್ಮಣ್ಯಂ ಸ್ವಾಮಿ ಹೇಳಿರುವುದರಲ್ಲಿ ಸತ್ಯವಿದೆ ಎಂದನಿಸುತ್ತಿಲ್ಲವೆ? ಇಷ್ಟಕ್ಕೂ ಅಣ್ಣಾ ಪಕ್ಷ ಕಟ್ಟುತ್ತಿದ್ದಾರೆ ಎಂಬ ಸೂಚನೆ ಹೊರಬಿದ್ದ ಕೂಡಲೇ ಮೊದಲು ಸ್ವಾಗತಿಸಿದವರಾರು? ಟಿವಿ ಆನ್ ಮಾಡಿ ಕಾಂಗ್ರೆಸ್‌ನ ಕಪಿಲ್ ಸಿಬಲ್, ದಿಗ್ವಿಜಯ್ ಸಿಂಗ್, ಅಂಬಿಕಾ ಸೋನಿ ಮುಖದಲ್ಲಿನ ಮಂದಹಾಸವನ್ನು ನೋಡಿ!? ನಾವು ಅಣ್ಣಾ ರಾಜಕೀಯ ಪ್ರವೇಶವನ್ನು ಸ್ವಾಗತಿಸುತ್ತೇವೆ ಎಂದು ಇವರೆಲ್ಲ ಹೇಳುತ್ತಿರುವುದರ ಹಿಂದಿನ ಲೆಕ್ಕಾಚಾರ ಯಾವುದು?

ಅದಿರಲಿ, ಅಣ್ಣಾ ಪಕ್ಷ ಕಟ್ಟಿದರೆ ಅದರಿಂದ ಸಿಗುವ ಲಾಭ ಯಾರಿಗೆ ಅಂದುಕೊಂಡಿರಿ?

ನಿನ್ನೆ, ಮೊನ್ನೆಯವರೆಗೂ ಅಣ್ಣಾ ಹಾಗೂ ಅಣ್ಣಾ ತಂಡವನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿದ್ದ, ಮಾಡಬಾರದ ಟೀಕೆ, ಆರೋಪ ಮಾಡುತ್ತಿದ್ದ, ಹೀನಾಯವಾಗಿ ನಿಂದಿಸುತ್ತಿದ್ದ ದಿಗ್ವಿಜಯ್ ಸಿಂಗ್, ಕಪಿಲ್ ಸಿಬಲ್ ಹಾಗೂ ಇತರ ಕಾಂಗ್ರೆಸ್ಸಿಗರು ಇದ್ದಕ್ಕಿದ್ದಂತೆ ಅಣ್ಣಾ ರಾಜಕೀಯ ಪ್ರವೇಶವನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಿರುವುದೇಕೆ? ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ಸೂಚಿಸುತ್ತಿರುವುದೇಕೆ? ಅದರಲ್ಲೂ ದಿಗ್ವಿಜಯ್ ಸಿಂಗ್ ಅವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಅಣ್ಣಾ ಜತೆ ಬಾಬಾ ರಾಮ್‌ದೇವ್ ಕೂಡ ತಮ್ಮದೇ ಪಕ್ಷ ಕಟ್ಟಿ ರಾಜಕೀಯಕ್ಕಿಳಿಯಲಿ, ಇಲ್ಲಾ ಅಣ್ಣಾ ಜತೆ ಸೇರಿಕೊಳ್ಳಲಿ ಎಂದಿದ್ದಾರೆ, ಏಕೆ?! ನೀವೇ ಹೇಳಿ, ಹೊಸ ಪಕ್ಷ ಕಟ್ಟಲು ಹೊರಟಿರುವ ಅಣ್ಣಾ ಯಾರ ವೋಟಿಗೆ ಕತ್ತರಿ ಹಾಕಲು ಹೊರಟಿದ್ದಾರೆ? ಕಾಂಗ್ರೆಸ್ಸೇತರ ಮತಗಳಿಗೇ ಅಲ್ಲವೆ? ಕಾಂಗ್ರೆಸ್ ವಿರೋಧಿ ಮತಗಳು ಒಡೆಯುವುದರಿಂದ ಯಾರಿಗೆ ಲಾಭ? ಸೋನಿಯಾ ಗಾಂಧಿಯವರಿಗೇ ಅಲ್ಲವೆ? ಅಂದಮೇಲೆ ಅಣ್ಣಾ ತಂಡದವರು ಪಕ್ಷ ಕಟ್ಟುವ ಮೂಲಕ 2014ರಲ್ಲಿ ಯಾರನ್ನು ಮತ್ತೆ ಅಧಿಕಾರಕ್ಕೇರಿಸಲು ಹೊರಟಿದ್ದಾರೆ? ಭ್ರಷ್ಟಾಚಾರವನ್ನು ತೊಡೆದು ಹಾಕುವ ಮಾತನಾಡುತ್ತಲೇ ಭ್ರಷ್ಟ ಕಾಂಗ್ರೆಸ್ಸಿಗೆ ಪರೋಕ್ಷವಾಗಿ ಸಹಾಯ ಮಾಡುವುದೇ ಇವರ ಉದ್ದೇಶವಾಗಿಲ್ಲವೆ? ಇಷ್ಟಕ್ಕೂ ಭ್ರಷ್ಟಾಚಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸುವುದು ಕೆಳವರ್ಗವೂ ಅಲ್ಲ, ಶ್ರೀಮಂತ ವರ್ಗವೂ ಅಲ್ಲ, ಮಧ್ಯಮವರ್ಗ. ಈ ದೇಶದಲ್ಲಿ ಭ್ರಷ್ಟಾಚಾರದಿಂದ ಅತಿಹೆಚ್ಚು ಸಮಸ್ಯೆ ಎದುರಿಸುತ್ತಿರುವುದೇ ನಗರವಾಸಿ ಮಧ್ಯಮ ಹಾಗೂ ನೌಕರವರ್ಗ. ಇವತ್ತು ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹಕ್ಕೆ ಅತಿಹೆಚ್ಚು ಬೆಂಬಲ ವ್ಯಕ್ತವಾಗುತ್ತಿರುವುದೇ ಇವರಿಂದ. ಇವರು ಯಾವ ಪಕ್ಷದ ಸಾಂಪ್ರದಾಯಿಕ ಮತದಾರರು? ಈ ವರ್ಗ ಪಾರಂಪರಿಕವಾಗಿ ಕಾಂಗ್ರೆಸ್ ವಿರೋಧಿ. ಈಗ ಬಿಜೆಪಿ, ಈ ಮೊದಲು ಜನತಾ ಪಕ್ಷದ ಪರ ವಾಲುತ್ತಿತ್ತು. ಅಂದಮೇಲೆ ಅಣ್ಣಾ ಅವರ ಪಕ್ಷ ಯಾರ ವೋಟಿಗಾದರೂ ಕೈಹಾಕಿದರೆ ಅದು ಬಿಜೆಪಿ ಹಾಗೂ ಕಾಂಗ್ರೆಸ್ ವಿರೋಧಿ ಮತಗಳಿಗೇ ಅಲ್ಲವೆ?

ಒಂದು ವೇಳೆ, ಅಣ್ಣಾ ಅವರ ಪಕ್ಷವೇನಾದರೂ ಒಂದೆರಡು ಪರ್ಸೆಂಟ್ ವೋಟು ಬಾಚಿಕೊಂಡರೂ ಆಗುವ ಅಪಾಯವೆಂಥದ್ದು ಗೊತ್ತೆ?

ಚುನಾವಣಾ ರಾಜಕೀಯದಲ್ಲಿ ಒಂದೊಂದು ಪರ್ಸೆಂಟ್ ವೋಟುಗಳೂ ಎಂತಹ ವ್ಯತ್ಯಾಸ ಮಾಡಬಲ್ಲವು ಅಂದುಕೊಂಡಿರಿ? 1998ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 25.82 ಪರ್ಸೆಂಟ್ ವೋಟು ಪಡೆದರೂ ಗೆದ್ದಿದ್ದು 141 ಸೀಟುಗಳನ್ನು. ಆದರೆ, ಕಾಂಗ್ರೆಸ್‌ಗಿಂತ ಕಡಿಮೆ, ಅಂದರೆ 25.50 ಪರ್ಸೆಂಟ್ ವೋಟು ಪಡೆದ ಬಿಜೆಪಿ 182 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಕಾಂಗ್ರೆಸ್ ಏಕಾಂಗಿಯಾಗಿ ಎಲ್ಲ ಸ್ಥಾನಗಳಿಗೂ ಸ್ಪರ್ಧಿಸಿದರೆ ಬಿಜೆಪಿ ತಾನು ಬಲಿಷ್ಠವಾಗಿರುವ ಕಡೆ ಮಾತ್ರ ಸ್ಪರ್ಧಿಸಿ ಉಳಿದವನ್ನು ಮಿತ್ರ ಪಕ್ಷಗಳಿಗೆ ಬಿಟ್ಟುಕೊಟ್ಟು ಹೆಚ್ಚಿನ ಸೀಟು ಗೆದ್ದಿತು. 2009ರಲ್ಲಿ ಕಾಂಗ್ರೆಸ್ ಬಿಜೆಪಿಯ ಕಾರ್ಯತಂತ್ರವನ್ನೇ ಕಾಪಿ ಮಾಡಿ 206 ಸೀಟು ಗೆದ್ದಿದ್ದು ಮಾತ್ರವಲ್ಲ, ಸರಾಸರಿ ಮತಗಳನ್ನೂ ಹೆಚ್ಚಿಸಿಕೊಂಡಿತು. ಇಂತಹ ಅತ್ಯಂತ ಸೂಕ್ಷ್ಮ ಚುನಾವಣಾ ಲೆಕ್ಕಾಚಾರಗಳು ಇರುವಾಗ ಕಾಂಗ್ರೆಸ್ ವಿರೋಧಿ ಮತಗಳಿಗೇ ಕೈಹಾಕಲು ಹೊರಟಿರುವ ಅಣ್ಣಾ ತಂಡ, ಪರೋಕ್ಷವಾಗಿ ಕಾಂಗ್ರೆಸ್ಸನ್ನು ಖುಷಿಪಡಿಸಲು ಹೊರಟಿದೆಯಷ್ಟೇ. ಇಲ್ಲವಾದಲ್ಲಿ ಕಪಿಲ್ ಸಿಬಲ್, ದಿಗ್ವಿಜಯ್ ಸಿಂಗ್ ಏಕೆ ಮಂದಹಾಸ ಬೀರುತ್ತಿದ್ದರು? ಅದರಲ್ಲೂ ಪ್ರಸ್ತುತ ಎದುರಾಗಿರುವ ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಕುಪಿತಗೊಂಡು ಕಾಂಗ್ರೆಸ್‌ಗೆ ಪಾಠ ಕಲಿಸಲು ಕಾದಿರುವ ಮಧ್ಯಮವರ್ಗದ ಮತಗಳನ್ನು ಅಣ್ಣಾ ವಿಭಜನೆ ಮಾಡಿದರೆ ಅದರ ಲಾಭ ಕಾಂಗ್ರೆಸ್‌ಗಲ್ಲದೆ ಮತ್ಯಾರಿಗಾಗುತ್ತದೆ? ತಾವು ಬೆದರಿಲ್ಲ ಎಂದು ತೋರಿಸಿಕೊಳ್ಳಲು ಬಿಜೆಪಿ ಕೂಡ ತಡವಾಗಿ ಅಣ್ಣಾ ನಿರ್ಧಾರವನ್ನು ಸ್ವಾಗತಿಸಿರಬಹುದು. ಆದರೆ ಪ್ರತೀಕೂಲ ಪರಿಣಾಮದ ಭಯ ಬಿಜೆಪಿಯನ್ನೂ ಖಂಡಿತ ಕಾಡುತ್ತಿರುತ್ತದೆ. ಹಾಗಿರುವಾಗ ಅಣ್ಣಾ ಅವರು ಯಾರಿಗೆ ಪರ್ಯಾಯವಾಗುತ್ತಾರೆ, ಬಿಜೆಪಿಗೋ, ಕಾಂಗ್ರೆಸ್‌ಗೋ? ಈ ವಿಚಾರ ಅಣ್ಣಾ ತಂಡವರಿಗೆ ಗೊತ್ತಿಲ್ಲವೆ? ಜಂತರ್ ಮಂತರ್ ಎದುರು ಮೈಕ್ ಮುಂದೆ ಭಾಷಣ ಬಿಗಿದ ಕೂಡಲೇ ಬದಲಾವಣೆ ತರುವುದಕ್ಕೆ, ಭ್ರಷ್ಟ ಕೇಂದ್ರ ಸರ್ಕಾರವನ್ನು ಕಿತ್ತೊಗೆಯುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅರಿಯದಷ್ಟು ಮುಗ್ಧರೇ ಇವರೆಲ್ಲ? ಅಂತಹ ತುರ್ತು ಪರಿಸ್ಥಿತಿ ಹೇರಿದ ಸಂದರ್ಭದಲ್ಲೂ ಏಕಾಂಗಿಯಾಗಿ ಕಾಂಗ್ರೆಸ್‌ಅನ್ನು ಹಣಿಯಲು ಸಾಧ್ಯವಿಲ್ಲ ಎಂಬ ಕಾರಣಕ್ಕೇ ಎಲ್ಲ ಪಕ್ಷಗಳು ಸೇರಿ ಜನತಾ ಪಕ್ಷ ಮಾಡಿಕೊಂಡಿದ್ದಲ್ಲವೆ? ಇನ್ನು ಅಂತಹ ರಾಷ್ಟ್ರವ್ಯಾಪಿ ಅಯೋಧ್ಯೆ ಚಳವಳಿಗೇ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಆಗಲಿಲ್ಲ, ಆಗ ಅದು ಗೆದ್ದದ್ದು 89 ಸೀಟು ಮಾತ್ರ. ಹಾಗಿರುವಾಗ ಕಾಂಗ್ರೆಸ್ ವಿರೋಧಿ ಮತಗಳನ್ನೇ ಒಡೆಯಲು ಹೊರಟಿರುವ ಇವರ ಉದ್ದೇಶದ ಬಗ್ಗೆ ಸಂಶಯ ಮೂಡುವುದಿಲ್ಲವೆ?

ಅಂದಹಾಗೆ, ಪಕ್ಷ ಕಟ್ಟಿ ಬದಲಾವಣೆ ತರುತ್ತೇವೆ ಎನ್ನುತ್ತಿರುವ ಈ ಅಣ್ಣಾ ತಂಡದಲ್ಲಿ ಅಣ್ಣಾ ಬಿಟ್ಟರೆ ಅಪ್ಪಟ ಪ್ರಾಮಾಣಿಕರು, ಉದ್ದೇಶ ಶುದ್ಧಿಯುಳ್ಳವರು ಯಾರಿದ್ದಾರೆ?

ಅರವಿಂದ ಕೇಜ್ರೀವಾಲ್? ಕಿರಣ್ ಬೇಡಿ? ಶಾಂತಿ ಹಾಗೂ ಪ್ರಶಾಂತ್ ಭೂಷಣ್? ಇವರೆಲ್ಲ ಕಲಿತವರು, ಇಂಗ್ಲಿಷ್ ಬಲ್ಲವರು, ಕುಶಲಮತಿಗಳು ಅನ್ನುವುದನ್ನು ಬಿಟ್ಟರೆ ಇವರ ಯೋಗ್ಯಾಯೋಗ್ಯತೆಯೇನು? ಇವರು ಸಮಾಜಕ್ಕೆ ಏನು ಮಾಡಿದ್ದಾರೆ? ತಮ್ಮ ಯೋಗ್ಯತೆ ಏನು ಎಂಬುದು ಇವರಿಗೆ ಗೊತ್ತಿರುವುದರಿಂದಲೇ ಅಲ್ಲವೇ ಸಾಮಾಜಿಕ ಸ್ವೀಕೃತಿಗೆ ಅಣ್ಣಾ ಎಂಬ ಮುಖವಾಡಕ್ಕೆ ಮೊರೆ ಹೋಗಿರುವುದು? ಅಣ್ಣಾ ಅವರನ್ನು ಹೊರಗಿಟ್ಟು ಪ್ರತ್ಯೇಕವಾಗಿ ಒಬ್ಬೊಬ್ಬರನ್ನೂ ನೋಡಿ?

ಅಂದು



ಇಂದು



ಇನ್ನು ಭ್ರಷ್ಟಾಚಾರದ ವಿಷಯದಲ್ಲಾದರೂ ಇವರಲ್ಲಿ ಬದ್ಧತೆಯಿದೆಯೇ? ಇವರು ಪ್ರಾಮಾಣಿಕವಾಗಿ ಭ್ರಷ್ಟಾಚಾರ ವಿರೋಧಿಗಳೇ ಆಗಿದ್ದರೆ ಗುಜರಾತ್ ಮುಖ್ಯಮಂತ್ರಿ ಮೋದಿಯವರನ್ನು ಮೊನ್ನೆ ಅನಗತ್ಯವಾಗಿ ತೆಗಳಿದ್ದೇಕೆ? ನರೇಂದ್ರ ಮೋದಿಯವರನ್ನು 'ಮಾನವತೆಯ ಮರ್ಡರರ್' ಎಂದು ಅಣ್ಣಾ ತಂಡದ ಸದಸ್ಯ ಸಂಜಯ್ ಸಿಂಗ್ ಅಪ್ರಚೋದಿತ ಆಕ್ರಮಣ ಮಾಡಿದ್ದರ ಹಿಂದೆ ಇದ್ದ ಉದ್ದೇಶ ಯಾವುದು? ಆ ಮೂಲಕ ಯಾರನ್ನ ಓಲೈಸಲು, ಯಾವ ಪಕ್ಷವನ್ನು ಸಂತುಷ್ಟಪಡಿಸಲು ಹೊರಟಿದ್ದಾರೆ? ಭ್ರಷ್ಟಾಚಾರವನ್ನು ಹತ್ತಿಕ್ಕಲು ಉಪವಾಸ ಕುಳಿತವರಿಗೂ ಗುಜರಾತ್ ಹಿಂಸಾಚಾರಕ್ಕೂ ಏನು ಸಂಬಂಧ? ನಾಳೆ ಇವರೂ ಮುಸ್ಲಿಂ ಓಲೈಕೆ ರಾಜಕಾರಣ ಮಾಡುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನಿದೆ? 2011, ಏಪ್ರಿಲ್‌ನಲ್ಲಿ ಅಣ್ಣಾ ಮೊದಲು ಉಪವಾಸಕ್ಕೆ ಕುಳಿತಾಗ ವೇದಿಕೆಯ ಪರದೆ ಮೇಲೆ ಭಗವಾಧ್ವಜ ಹಿಡಿದ ಭಾರತ ಮಾತೆ ರಾರಾಜಿಸುತ್ತಿದ್ದಳು, ಭಗತ್ ಸಿಂಗ್, ಸುಭಾಶ್ಚಂದ್ರ ಬೋಸ್, ಸಾವರ್ಕರ್ ಭಾವಚಿತ್ರಗಳಿದ್ದವು. ನಿನ್ನೆಗೆ 10 ದಿನಗಳ ಕಾಲ ನಡೆದ ಉಪವಾಸದ ವೇಳೆ ವೇದಿಕೆಯಲ್ಲಿ ಭಾರತ ಮಾತೆ ಕಂಡಳೆ? ಆಕೆ ಮಾಯವಾಗಿದ್ದಾದರೂ ಏಕೆ? ಮುಸ್ಲಿಮರಲ್ಲಿ ಕೆಲವರು ವಿರೋಧಿಸಿದರೆಂಬ ಕಾರಣಕ್ಕೆ ಭಾರತ ಮಾತೆಯನ್ನು ಹೊಂದಿದ್ದ ಚಿಹ್ನೆಯನ್ನೇ ಬದಲಾಯಿಸುವುದಾದರೆ, ಮುಂದೆ ವೋಟಿಗಾಗಿ ಇವರು ಯಾವ ಮಟ್ಟಕ್ಕೆ ಇಳಿಯಬಹುದು ಎಂಬ ಅನುಮಾನ ಕಾಡುವುದಿಲ್ಲವೆ? ಕಾಂಗ್ರೆಸ್ ವಿರೋಧಿಸಿ ಪ್ರಜಾರಾಜ್ಯಂ ಕಟ್ಟಿದ ಚಿರಂಜೀವಿ ಈಗ ಕಾಂಗ್ರೆಸ್ ಸೇರಿದಂತೆ ಈ ಅಣ್ಣಾ ತಂಡದವರೂ ಕಾಂಗ್ರೆಸ್‌ನ ತಾಳಕ್ಕೆ ತಕ್ಕಂತೆ ಕುಣಿಯುತ್ತಿಲ್ಲ ಎಂಬುದಕ್ಕೆ ಯಾವ ಖಾತ್ರಿಯಿದೆ? ಬಾಬಾ ರಾಮ್‌ದೇವ್ ರಾಮಲೀಲಾ ಮೈದಾನದಲ್ಲಿ ಉಪವಾಸಕ್ಕೆ ಕುಳಿತಾಗ ಸರ್ಕಾರ ಲಾಠಿ ಚಾರ್ಜ್ ಮಾಡಿಸಿತು. ಆದರೆ ಅಣ್ಣಾ ತಂಡವರು ಜಂತರ್‌ಮಂತರ್‌ನಲ್ಲಿ ಮೂರು ಸಲ ಉಪವಾಸ ಮಾಡಿದರೂ ಏಕೆ ಒಮ್ಮೆಯೂ ಅವರ ಮೇಲೆ ಲಾಠಿ ಚಾರ್ಜ್ ಮಾಡಿಸಲಿಲ್ಲ? ರಾಮದೇವ್ ಸಹಾಯಕ ಆಚಾರ್ಯ ಬಾಲಕೃಷ್ಣ ಅವರನ್ನು ಸಿಬಿಐ ಜಾಮೀನು ರಹಿತ ಬಂಧನ ಮಾಡಿದೆ. ಅಂತಹ ಯಾವ ಕ್ರಮವನ್ನು ಅಣ್ಣಾ ತಂಡದ ವಿರುದ್ಧ ತೆಗೆದುಕೊಂಡಿದ್ದಾರೆ?

ಅಣ್ಣಾ ಹಝಾರೆಯವರು ಇವತ್ತು ಲೋಕಪಾಲಕ್ಕಾಗಿ ಹೋರಾಡುತ್ತಿರಬಹುದು. ಬಾಬಾ ರಾಮ್‌ದೇವ್ ಕೂಡ ಕಡಿಮೆಯೇನಲ್ಲ. ಕಳೆದ ಹತ್ತು ವರ್ಷಗಳಿಂದ ಜನಜಾಗೃತಿ ಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದಾರೆ. ಮೊದಮೊದಲಿಗೆ ಪೆಪ್ಸಿ, ಕೋಲಾದಿಂದಾಗುವ ಆರೋಗ್ಯಹಾನಿಯ ಬಗ್ಗೆ ಹೇಳಿದರು. ನಂತರ ಬಹುರಾಷ್ಟ್ರೀಯ ಕಂಪನಿಗಳ ಲೂಟಿಯ ಬಗ್ಗೆ ಗಮನ ಸೆಳೆದರು, ಆನಂತರ ದೇಶದ ಮೂಲೆಮೂಲೆಗೂ ಹೋಗಿ ಬ್ಲ್ಯಾಕ್‌ಮನಿ ಬಗ್ಗೆ ಧ್ವನಿಯೆತ್ತಿದರು. ಆದರೆ ಅಣ್ಣಾ ಮತ್ತು ರಾಮ್‌ದೇವ್ ಮಧ್ಯೆ ಇರುವ ವ್ಯತ್ಯಾಸವೆಂದರೆ ಅಣ್ಣಾಗೆ ಇಂಗ್ಲಿಷ್ ಬಲ್ಲ ಪ್ರಳಯಾಂತಕ ಶಿಷ್ಯರಿದ್ದಾರೆ, ರಾಮ್‌ದೇವ್ ಪರ ಮಾತನಾಡುವವರು ಹಿಂದಿ ಮಾತನಾಡುವವರು. ಈ ಪ್ರಳಯಾಂತಕರು ಮೊದಲು ಲೋಕಪಾಲ್, ನಂತರ ಎಲೆಕ್ಟೋರಲ್ ರಿಫಾರ್ಮ್ಸ್ ಅಥವಾ ಚುನಾವಣಾ ಸುಧಾರಣೆಯನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಬೊಬ್ಬೆಹಾಕುತ್ತಿದ್ದರು. ಅವುಗಳನ್ನೆಲ್ಲಾ ಮಧ್ಯಕ್ಕೆ ಬಿಟ್ಟು ಪಕ್ಷ ಕಟ್ಟಲು ಹೊರಟಿರುವುದೇಕೆ? ಇವರನ್ನು ನೋಡಿದರೆ ವಿ.ಪಿ. ಸಿಂಗ್ ನೆನಪಾಗುತ್ತಾರೆ! 'ನಾನೇ ಬೊಫೋರ್ಸ್ ಹಗರಣವನ್ನು ಬೆಳಕಿಗೆ ತಂದಿದ್ದು' ಅಂತೆಲ್ಲ ಬೊಗಳೆ ಬಿಟ್ಟು ಅಧಿಕಾರಕ್ಕೆ ಬಂದ ಅವರು ಆಮೇಲೆ ಮಾಡಿದ್ದೇನು? ಬೊಫೋರ್ಸ್ ಹಗರಣದ ಬಗ್ಗೆ ಸೂಕ್ತ ತನಿಖೆಯನ್ನೇ ಮಾಡಿಸಲಿಲ್ಲ, ಅಲ್ಲವೇ?

ಅಣ್ಣಾ ತಂಡದವರೇ, ಈ ದೇಶದ ಎಷ್ಟೋ ಮತದಾರರು ಅನಕ್ಷರಸ್ಥರಿರಬಹುದು, ಆದರೆ ದಡ್ಡರಲ್ಲ. ದಕ್ಷಿಣ ದಿಲ್ಲಿಯಲ್ಲಿ ಅರ್ಥಶಾಸ್ತ್ರಜ್ಞ ಮನಮೋಹನ್ ಸಿಂಗ್ ಅವರನ್ನು 1999ರಲ್ಲಿ ಜನ ಸೋಲಿಸಿದ್ದರು, 'ಯು ಕ್ಯಾನ್ ವಿನ್' ಎಂಬ ಜನಪ್ರಿಯ ಪುಸ್ತಕ ಬರೆದ ಶಿವ ಖೇರಾ ಕೂಡಾ ಠೇವಣಿ ಕಳೆದುಕೊಂಡ ಉದಾಹರಣೆ ನಮ್ಮ ಮುಂದಿದೆ. ಕ್ಯಾಪ್ಟನ್ ಗೋಪಿನಾಥ್ 2009ರಲ್ಲಿ ಬೆಂಗಳೂರು ದಕ್ಷಿಣದಲ್ಲಿ ಠೇವಣಿ ಕಳೆದುಕೊಂಡಿದ್ದರು, ಶಿವರಾಮ ಕಾರಂತರು, ಜನರಲ್ ತಿಮ್ಮಯ್ಯ ಸೋತಿದ್ದಿದೆ, ವಿಶ್ವಕಪ್ ಗೆದ್ದಾಗ ಪಾಕಿಸ್ತಾನದಾದ್ಯಂತ ಎದ್ದ ಜನಪ್ರಿಯತೆಯ ಅಲೆಯಿಂದ ಉತ್ತೇಜಿತರಾಗಿ ಅಧಿಕಾರ ಹಿಡಿಯಲು 'ತೆಹ್ರಿಕೆ ಇನ್ಸಾಫ್' ಪಕ್ಷ ಕಟ್ಟಿದ ಇಮ್ರಾನ್ ಖಾನ್ ಸ್ಪರ್ಧಿಸಿದ 6 ಕಡೆಗಳಲ್ಲೂ ಸೋತಿದ್ದು ನೆನಪಿರಬೇಕಲ್ಲವೇ? ಇವತ್ತು ಅಣ್ಣಾ ಟೀಮಿನಲ್ಲಿ ಮಾನಸಿಕವಾಗಿ ಸ್ಥಿಮಿತದಲ್ಲಿರುವ, ಪ್ರಾಮಾಣಿಕರೆನಿಸಿಕೊಂಡಿರುವ, ಯಾವುದೇ ಉದ್ದೇಶಗಳಿಟ್ಟುಕೊಳ್ಳದ, ಸ್ವತಂತ್ರ್ಯವಾಗಿ ಯೋಚಿಸುವ ಹಾಗೂ ಭ್ರಷ್ಟಾಚಾರದ ಬಗ್ಗೆ ನಿಜವಾಗಿಯೂ ಸಾತ್ವಿಕ ಸಿಟ್ಟು ಇಟ್ಟುಕೊಂಡಿರುವ ಏಕೈಕ ವ್ಯಕ್ತಿ ನಮ್ಮ ಸಂತೋಷ್ ಹೆಗ್ಡೆ ಮಾತ್ರ.

ಅಣ್ಣಾ ಅವರೇ, ನಿಮ್ಮ ತಂಡದಲ್ಲಿರುವವರಾರೂ ನಿಮ್ಮ ಮಾತು ಕೇಳುವುದಿಲ್ಲ ಎಂಬುದನ್ನು ಕಳೆದ ಜುಲೈನಲ್ಲಿ ನಡೆದ ಗೌಪ್ಯ ಮಾತುಕತೆ ವೇಳೆ ನೀವೇ ಒಪ್ಪಿಕೊಂಡಿದ್ದೀರಿ ಎಂದು ಕೇಂದ್ರ ಸಚಿವ ಹಾಗೂ ಸರ್ಕಾರದ ಪ್ರತಿನಿಧಿಯಾಗಿದ್ದ ಸಲ್ಮಾನ್ ಖುರ್ಷಿದ್ ಹೇಳಿದ್ದಾರೆ. ನಿಮ್ಮ ವೈಯಕ್ತಿಕ ಬ್ಲಾಗರ್ ಆಗಿದ್ದ ರಾಜು ಪರುಲೇಕರ್, ನಿಮ್ಮನ್ನು ಕಿರಣ್ ಬೇಡಿ ಮತ್ತು ಕೇಜ್ರೀವಾಲ್ ಹೇಗೆ ಬಂಧಿಯಾಗಿಟ್ಟುಕೊಂಡಿದ್ದಾರೆ ಎಂಬುದನ್ನು ಬಹಿರಂಗಗೊಳಿಸಿದ್ದಾರೆ. ಈ ಮಧ್ಯೆ, "If Anna cannot run Team Anna, then how can he run the country' ಎಂದು ಸುಬ್ರಹ್ಮಣ್ಯಂ ಸ್ವಾಮಿ ನಿಮ್ಮನ್ನು ಪ್ರಶ್ನಿಸಿದ್ದಾರೆ. 'ಕುದುರೆ ಕಟ್ಟಲು ಬಾರದವನು ರಥ ಚಲಾಯಿಸಿಯಾನೇ?' ಎಂಬ ಮಾತಿರುವುದು ನಿಮಗೂ ಗೊತ್ತಿರಬಹುದು. ಇಷ್ಟಕ್ಕೂ ನೀವು ಯಾವ ಭಾರತಮಾತೆಯಿಂದ ಪ್ರೇರಣೆ ಪಡೆಯುತ್ತಿದ್ದಿರೋ ಅದೇ ಭಾರತಮಾತೆಯ ಭಾವಚಿತ್ರವನ್ನು ಚಿಹ್ನೆಯಿಂದಲೇ ಕಿತ್ತೊಗೆಯುತ್ತಾರೆಂದರೆ ನಿಮಗೆ ನಿಮ್ಮ ತಂಡದ ಮೇಲೆ ಯಾವ ನಿಯಂತ್ರಣವಿದೆ ಹೇಳಿ ಅಣ್ಣಾ? ನಿಮ್ಮ ತಂಡದ ಸಾಚಾತನದ ಬಗ್ಗೆ ಜನರ ಮನಸ್ಸಿನಲ್ಲಿ ಅನುಮಾನ, ಅಪನಂಬಿಕೆ ಮೂಡುವುದಿಲ್ಲವೇ? ಅಣ್ಣಾ, ನೀವು ಮೂಲತಃ ಸೇನೆಯಲ್ಲಿ ಟ್ರಕ್ ಡ್ರೈವರ್ ಆಗಿದ್ದವರು. ಕ್ಲೀನರ್‌ಗಳು ಗಾಡಿ ಚಲಾಯಿಸಿ ಆ್ಯಕ್ಸಿಡೆಂಟ್ ಮಾಡುವ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿರುತ್ತವೆ! ನಿಮ್ಮ ತಂಡದವರೂ ಕಾಂಗ್ರೆಸ್‌ಗೆ ಲಾಭ ಮಾಡಿಕೊಡುವ ಸಲುವಾಗಿ ಪಕ್ಷ ಕಟ್ಟಿ ದೇಶವನ್ನು ಹೊಂಡಕ್ಕೆ ಕೆಡವದಿದ್ದರೆ ಸಾಕು. ಅಂದಹಾಗೆ, ನೀವು ಮೇಲ್ಪಂಕ್ತಿಯಾಗಿಟ್ಟುಕೊಂಡಿರುವ ಮಹಾತ್ಮ ಗಾಂಧೀಜಿಯವರೂ ಕೊನೆಗೆ ಚುಕ್ಕಾಣಿಯನ್ನು ನೆಹರುಗೆ ಕೊಟ್ಟು ದೇಶವನ್ನು ಹಳ್ಳಕ್ಕೆ ತಳ್ಳಿದ್ದರು.

ಎಚ್ಚರ!

# ನಾವು ಮೊದಲು ಕೆಲಸ ಮಾಡುವುದನ್ನು ಕಲಿಯಬೇಕು

**ನಿಖರ ಮಾತು**



■ ಎಚ್.ಎಸ್. ಬಲರಾಮ್
hsbalram@gmail.com

**ಭಾ**ರತ ಇಂದು ಸುಪರ್ ಪವರ್ ಆಗಿ ಬೆಳೆಯುತ್ತಿದೆ ಎಂದು ನಾವು ಹೆಮ್ಮೆಪಡುತ್ತೇವೆ. ಆದರೆ ಇದೆಷ್ಟು ಸತ್ಯ? ದೇಶದ ಬಹುಭಾಗದಲ್ಲಿ ಕಾಡುತ್ತಿರುವ ವಿದ್ಯುತ್ ಸಮಸ್ಯೆಯ ವಿಷಯವನ್ನೇ ತೆಗೆದುಕೊಳ್ಳಿ, ರಾಜಧಾನಿ ದೆಹಲಿ ಸೇರಿದಂತೆ 21 ರಾಷ್ಟ್ರಗಳು ಕಳೆದ ಒಂದು ವಾರದಿಂದ ವಿದ್ಯುತ್ ಸಮಸ್ಯೆ ಎದುರಿಸುತ್ತಲೇ ಇವೆ. ಪವರ್ ಗ್ರಿಡ್‌ಗಳ ಕುಸಿತದಿಂದಾಗಿ ಸಾಮಾನ್ಯ ಜೀವನ ಸ್ತಬ್ದವಾಗಿಬಿಟ್ಟಿದೆ. ರೈಲುಗಳು ಪಟರಿಗಳ ಮೇಲೆ ತೆಪ್ಪಗೆ ಮಲಗಿವೆ, ಮೆಟ್ರೋ ರೈಲುಗಳದ್ದೂ ಇದೇ ಪರಿಸ್ಥಿತಿ. ವಿದ್ಯುತ್ ಸಮಸ್ಯೆಯಿಂದಾಗಿ ಉದ್ಯಮಗಳಿಗೆ ಹೊಡೆತ ಬಿದ್ದಿದೆ, ಆಸ್ಪತ್ರೆಗಳಲೆಲ್ಲಾ ರೋಗಿಗಳು ಕತ್ತಲಿಂದ ತತ್ತರಿಸಿಹೋಗಿದ್ದಾರೆ. ಕಲ್ಲಿದ್ದಲು ಗಣಿಗಳಲ್ಲಿ ಕೆಲಸಗಾರರು ಸಿಲುಕಿಹಾಕಿಕೊಂಡಿದ್ದಾರೆ. ವಿದ್ಯುತ್ ಜಾಲ ಹೀಗೆ ಹಠಾತ್ತಾಗಿ ಕುಸಿಯುವುದಕ್ಕೆ ಕಾರಣವೇ ತಿಳಿಯದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲೆಕೆಡಿಸಿಕೊಳ್ಳುತ್ತಿವೆ. ಅಧಿಕಾರಿಗಳು ದಿಕ್ಕು ತೋಚದೆ ಸುಮ್ಮನೆ ಓಡಾಡುತ್ತಿದ್ದರೆ, ಜನ ಬೆವೆತು ಬಸವಳಿಯುತ್ತಿದ್ದಾರೆ.

ಸತ್ಯವೇನೆಂದರೆ ವಿದ್ಯುತ್ ಅನ್ನುವುದು ನಮ್ಮ ದೇಶದಲ್ಲಿ ಅತ್ಯಂತ ಕಳಪೆಮಟ್ಟದಲ್ಲಿ ನಿಭಾಯಿಸಲ್ಪಡುತ್ತಿರುವ ವಲಯಗಳಲ್ಲೊಂದು. ಬೇಡಿಕೆ ಮತ್ತು ಪೂರೈಕೆಯ ನಡುವೆ ಬೃಹತ್ ಅಂತರವಿದೆ. ಈ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನ ನಡೆಯುತ್ತಲೇ ಇಲ್ಲ. ವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ವಹಣೆ ಅಧೋಗತಿಗಿಳಿದಿದೆ. ರಾಜ್ಯ ವಿದ್ಯುತ್ ನಿಗಮಗಳು ಫಂಡುಗಳಿಲ್ಲದೆ ಸೊರಗುತ್ತಿವೆ. ಅನುದಾನ ಮತ್ತು ವಿದ್ಯುತ್ ಕಳ್ಳತನ ಭಾರಿ ಪ್ರಮಾಣದಲ್ಲಿ ನಷ್ಟ ಉಂಟು ಮಾಡುತ್ತಿವೆ. ರಾಜಕೀಯ ಮಧ್ಯಸ್ಥಿಕೆ ಈ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಇನ್ನು ತಜ್ಞರಿಂದ ತಿದ್ದುಪಾಟು ಮಾಡಲು ನೀಡಿದ ಸಲಹೆಗಳೆಲ್ಲಾ ಅಧಿಕಾರದ ಮೊಗಸಾಲೆಯಲ್ಲಿ ಧೂಳು ತಿನ್ನುತ್ತಾ ಬಿದ್ದಿವೆ. ಇನ್ನು ಬದಲಾವಣೆ ತರಬಲ್ಲ ರಾಜಕೀಯ ಇಚ್ಛಾಶಕ್ತಿ ಎಲ್ಲೂ ಕಾಣುತ್ತಿಲ್ಲ.

ವಿದ್ಯುತ್ ಕಡಿತ ಎನ್ನುವುದು ಇಂದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಅದಕ್ಕೆ ಹೊತ್ತು ಗೊತ್ತು ಎನ್ನುವುದೇ ಇಲ್ಲ. ಪ್ರತಿದಿನವೂ ವಿದ್ಯುತ್ ಯಾವುದೋ ಸಮಯಕ್ಕೆ ವಿದ್ಯುತ್ ಕೈ ಕೊಡುತ್ತದೆ. ಇನ್ನು ಇದಕ್ಕೆಲ್ಲಾ ನಿರ್ವಹಣೆ ಎನ್ನುವ ನೆಪ ಬೇರೆ. ಅದು ನಿಜವೇ ಆದರೆ ನಮ್ಮ ಎಲ್ಲಾ ವಿದ್ಯುತ್ ಸ್ಥಾವರಗಳೂ ಯಾವುದೇ ತೊಂದರೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದವು! ಗ್ರಾಮೀಣ ಪ್ರದೇಶಗಳಲ್ಲಂತೂ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ವಿದ್ಯುತ್ ಕಡಿತ ಎನ್ನುವುದು ಅವರಿಗೆ ದೊಡ್ಡ ವಿಷಯವೇ ಅಲ್ಲ ಅನ್ನುವಷ್ಟರ ಮಟ್ಟಿಗೆ ಅದಕ್ಕೆ ಒಗ್ಗಿಕೊಂಡುಬಿಟ್ಟಿದ್ದಾರೆ. ಆದರೆ ಪ್ರತಿದಿವಸವೂ ತಮಗೆ ಕೊಡುವ ವಿದ್ಯುತ್‌ಗಾಗಿ ಅವರು ಕಾಯುತ್ತಾರೆ.

ಕತ್ತಲಲ್ಲೇ ಭಾರತದ ಬಹುತೇಕ ರಾಜ್ಯಗಳು ಮುಳುಗಿರುವಾಗಲೇ, ವಿದ್ಯುತ್ ಮಂತ್ರಿ ಸುಶೀಲ್ ಕುಮಾರ್ ಶಿಂಧೆ ಅವರನ್ನು ಆ ಹುದ್ದೆಯಿಂದ ಕೆಳಗಿಳಿಸಲಾಯಿತು. ಸರ್ಕಾರದ ಈ ನಡೆಯನ್ನು ಜನ ಮೆಚ್ಚಿಕೊಳ್ಳುವ ಮೊದಲೇ ಅವರನ್ನು ಗೃಹ ಮಂತ್ರಿ ಕುರ್ಚಿಯ ಮೇಲೆ ಕೂರಿಸಲಾಯಿತು! ಹೀಗೆ ಮಾಡುವುದರಿಂದ ಸರ್ಕಾರದ ಬಗ್ಗೆ ಜನರಿಗೆ ಕೆಟ್ಟ ಭಾವನೆ ಮೂಡುವುದಿಲ್ಲವೇ? ಶಿಂಧೆ ಅವರಿಗೆ ಮುಂಬಡ್ತಿ ನೀಡಿರುವುದರಿಂದ ಸರ್ಕಾರಕ್ಕೆ ಈ ಸಮಸ್ಯೆಯ ಬಗ್ಗೆ ಕಾಳಜಿಯೇ ಇಲ್ಲ ಎಂದು ಜನತೆಗೆ ತಪ್ಪುಸಂದೇಶವನ್ನು ಕಳುಹಿಸಿದಂತಾಗುವುದಿಲ್ಲವೇ? ಇದೂ ಒಂದು ರೀತಿಯಲ್ಲಿ ಮ್ಯೂಸಿಕಲ್ ಚೇರ್ ಆಟದಂತೆಯೇ, ಒಂದು ಕುರ್ಚಿಯಿಂದ ಇನ್ನೊಂದು ಕುರ್ಚಿಗೆ ಓಡುವುದು. ಇಷ್ಟೆಲ್ಲಾ ಆದಮೇಲೂ ಶಿಂಧೆ ಹೇಳುವುದೇನೆಂದರೆ–'ಇಂಥದ್ದೆಲ್ಲಾ ಪ್ರಪಂಚದ ತುಂಬಾ ನಡೆಯುತ್ತಿರುತ್ತವೆ'. ಇವರ ಮಾತನ್ನು ಕೇಳಿದರೆ ನಮಗೆ ರೋಮ್ ನಗರ ಹೊತ್ತಿ ಉರಿಯುತ್ತಿದ್ದಾಗ ನೀರೋ ಪಿಟೀಲ್ ಬಾರಿಸುತ್ತಿದ್ದ ಎನ್ನುವ ಕಥೆ ನೆನಪಾಗುವುದಿಲ್ಲವೇ?

ಪರ್ಯಾಯ ವಿದ್ಯುತ್ ಶಕ್ತಿ ಉತ್ಪಾದನಾ ಪ್ರಕ್ರಿಯೆಗಳನ್ನು ಕೈಗೊಳ್ಳುವ ಸಮಯ ಬಂದಿದೆ. ನಾವು ಶಾಖೋತ್ಪನ್ನ ಮತ್ತು ಜಲವಿದ್ಯುತ್ ಕೇಂದ್ರಗಳಿಂದ ವಿದ್ಯುತ್ ಪಡೆಯುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಸೌರವಿದ್ಯುತ್ ಉತ್ಪಾದನೆಯತ್ತ ನಾವು ಹೆಚ್ಚು ಗಮನ ಹರಿಸಬೇಕು. ಈ ಕುರಿತು ಪ್ರಯತ್ನಗಳು ನಡೆಯುತ್ತಿವೆಯಾದರೂ, ಅವುಗಳು ಹೇಳಿಕೊಳ್ಳುವಂತಿಲ್ಲ. ಸೌರ ಶಕ್ತಿಯೆನ್ನುವುದು ಅತಿ ಸುಲಭವಾಗಿ ದೊರೆಯುತ್ತದೆ. ಇನ್ನು ಪ್ರತಿ ಯೂನಿಟ್‌ನ ಬೆಲೆ ಕೇವಲ 15 ಪೈಸೆಯಷ್ಟಿರುತ್ತದೆ. ಇನ್ನು ಉಷ್ಣ ಮಾಡುವುದಕ್ಕಾಗಿಯೇ ಈ ಶಕ್ತಿ ಹೆಚ್ಚಾಗಿ ಬಳಕೆಯಾಗುತ್ತದೆ. ಹಾಗೆ ನೋಡಿದರೆ ಭಾರತದಲ್ಲಿ ಉತ್ಪಾದನೆಯಾಗುವ ಶೇ 70 ಪ್ರತಿಶತದಷ್ಟು ವಿದ್ಯುತ್‌ಶಕ್ತಿ ವ್ಯಯವಾಗುವುದು ಇದೇ ಕೆಲಸಕ್ಕೇ. ಸೌರ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲು ತಗುಲುವ ವೆಚ್ಚ ತುಸು ಹೆಚ್ಚೇ ಆದರು, ಮುಂದೆ ಅದು ನಮಗೆ ತುಂಬಾ ಲಾಭ ಮಾಡಿಕೊಡುತ್ತದೆ ಅನ್ನುವುದಂತೂ ಸುಳ್ಳಲ್ಲ. ಇನ್ನು ಪ್ರತಿ ಮನೆಗಳನ್ನು ಸೌರ ಶಕ್ತಿಯನ್ನು ಉಪಯೋಗಿಸುವಂತೆ ಸರ್ಕಾರಗಳು ಉತ್ತೇಜನ ನೀಡಬೇಕು. ಇದರಿಂದಾಗಿ ಸರ್ಕಾರದ ಸಮಸ್ಯೆಯೂ ತಕ್ಕ ಮಟ್ಟಿಗೆ ತಗ್ಗುತ್ತದೆ ಮತ್ತು ಕರೆಂಟ್ ಬಿಲ್‌ನಲ್ಲೂ ಕೂಡ ಉಳಿತಾಯವಾಗುತ್ತದೆ.

ಯಾರೋ ಸರಿಯಾಗಿಯೇ ಹೇಳಿದ್ದಾರೆ, ಭಾರತ ಬಡದೇಶವಲ್ಲ ಆದರೆ ಬಡವಾಗಿ ನಿಭಾಯಿಸಲ್ಪಡುತ್ತಿರುವ ದೇಶ ಎಂದು. ನಮಗೆ ಸಮರ್ಥ ನಾಯಕರ ಅಗತ್ಯವಿದೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆ ಇರುವ ಸರ್ಕಾರ ನಮಗೆ ಬೇಕು. ಇನ್ನು ನಾವೂ ಅಷ್ಟೆ, 'ಚಲ್ತಾ ಹೇ' ಎನ್ನುವ ಮನೋಭಾವವನ್ನು ಮೊದಲು ಬಿಡಬೇಕು. ಈ ಇಕ್ಕಟ್ಟಿನಿಂದ ಹೊರಬರಲು ನಾವು ಬಲವಾಗಿ ಪ್ರಯತ್ನಿಸಬೇಕು. ಬರೀ ಪ್ರತಿಕ್ರಿಯಿಸುವುದನ್ನು ಬಿಟ್ಟು ಕೆಲಸ ಮಾಡುವುದನ್ನು ಕಲಿಯಬೇಕು. ಭಾರತ ಸುಪರ್ ಪವರ್ ಆಗಿ ಬೆಳೆಯುತ್ತಿದೆ ಎನ್ನುವುದು ಸುಳ್ಳಲ್ಲ. ಆದರೆ ನಮ್ಮಲ್ಲಿರುವ ಕೊರತೆಯೆಂದರೆ ಭಾತರೀಯರಿಗೆ ಪ್ರಾಮಾಣಿಕತೆ ಮತ್ತು ಕಠಿಣ ನಿಲುವನ್ನು ತಾಳುವ ಶಕ್ತಿ ಇರದೇ ಇರುವುದು.



**ಕೊನೆಯ ಗುಟುಕು:** ಧರ್ಮ ರಕ್ಷಕರು ಎಂಬ ಮುಖವಾಡ ಹಾಕಿಕೊಂಡು ಮಂಗಳೂರಿನಲ್ಲಿ ಹೆಣ್ಣುಮಕ್ಕಳ ಮೇಲೆ ಕೆಲವು ಪುಂಡರು ದಾಳಿ ಮಾಡುತ್ತಿದ್ದಾಗ ಟಿ.ವಿ ಕ್ಯಾಮೆರಾಮೆನ್ ಅದನ್ನೆಲ್ಲಾ ಚಿತ್ರಿಸಿದ್ದು ಸರಿಯೇ? ಪರೋಕ್ಷವಾಗಿ ಆ ಕಿಡಿಗೇಡಿಗಳನ್ನು ಅವರು ಬೆಂಬಲಿಸಿದಂತಾಗಲಿಲ್ಲವೇ? ಮಾಧ್ಯಮದ ಮಂದಿಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಅವಶ್ಯಕತೆ ಬಂದಿದೆ.

(ಈ ಲೇಖನದ ಇಂಗ್ಲಿಷ್ ಅವತರಣಿಕೆ www.namma-bengaluru.org ಹಾಗೂ www.suvarnanews.tv/features ನಲ್ಲಿ ಕನ್ನಡ ಅಂಕಣ ಲಭ್ಯ)

### ತೂಕದ ಮಾತು

ಸಲಹೆ ನೀಡುವವರು ಅಷ್ಟೇ ನಿಷ್ಠೆಯಿಂದ ಎದುರಿನವರ ಮಾತನ್ನೂ ಆಲಿಸಬೇಕು

### ವಕ್ರತುಂಡೋಕ್ತಿ

ಹೆಂಗಸರು ಒರಟಾಗಿರಬಹುದು, ಜಿಗುಟಾಗಿರಬಹುದು, ಭಾವನಾರಹಿತರಾಗಿರಬಹುದು, ಸಿಡುಕರಾಗಿರಬಹುದು, ಗಂಡಸರನ್ನು ತಮ್ಮ ಮಾತಿಗೆ ತಕ್ಕಂತೆ ಕುಣಿಸಬಹುದು, ಆದರೆ ಒಂದಂತೂ ನಿಜ, ಅವರೆಂದೂ ತಪ್ಪು ಮಾಡುವುದಿಲ್ಲ.

### ಟ್ವಿಭಾಷಿತ

ಮನಮೋಹನ ಸಿಂಗ್ ಅವರ ಹೇಳಿಕೆ: ಪ್ರೀತಿಯ ದೇಶವಾಸಿಗಳೇ, ನಾನು ಕಳೆದ 8 ವರ್ಷಗಳಿಂದ ಅನುಭವಿಸಿದ್ದನ್ನು ನೀವೂ ಅನುಭವಿಸಬೇಕು ಎಂದು ಹೀಗೆ ಮಾಡಿದೆ. NO POWER!

